| | | |
|---|---|---|
| OS | 248/2024 | ಪಿ.ಡಬ್ಲ್ಯೂ 3 |

ಇಂದು ದಿಃ 07.03.2026. ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ವಾದಿಪರ ವಕೀಲರಿಂದಃ

ನನ್ನ ಮುಖ್ಯ ವಿಚಾರಣೆಯ ಬಾಬ್ತು ಪ್ರಮಾಣಪತ್ರ ಸಲ್ಲಿಸಿದ್ದು ಅದರಲ್ಲಿ ಹೇಳಿರುವ ವಿಚಾರಗಳು ಸತ್ಯವಾಗಿದ್ದು, ನಾನೇ ಹೇಳಿ ಬರೆಸಿರುತ್ತೇನೆ.

ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ

ಮಾದಪ್ಪ ಗೊತ್ತು. ವಾದಿಯ ಜೊತೆ ನಾನು ಚೆನ್ನಾಗಿದ್ದೇನೆ. ವಾದಿ ಮತ್ತು ಪ್ರತಿವಾದಿಗಳ ನಡುವೆ 20 ವರ್ಷಗಳಿಂದ ಸಿವಿಲ್ ವ್ಯಾಜ್ಯ ನಡೆಯುತ್ತಿರುವುದು ಗೊತ್ತು. ನಂಜಪ್ಪ ಗೊತ್ತು. ನಂಜಪ್ಪ ದಾಖಲಿಸಿದ್ದ ದಾವೆ ಬಗ್ಗೆ ನನಗೆ ಗೊತ್ತು. ಆ ದಾವೆ ವಜಾ ಆಗಿರುವುದು ಸಹ ಗೊತ್ತು. ಅನುಭೋಗದ ಹಕ್ಕಿನಡಿ ದಾವೆ ಸಲ್ಲಿಸಿದ್ದರು. ನಮ್ಮ ಅಪ್ಪನ ಆಸ್ತಿ ಬರಬೇಕು ಎಂದು ಈ ದಾವೆ ಸಲ್ಲಿಸಿರುತ್ತಾರೆ. 1942 ರ ಪಾಲುಪಟ್ಟಿಯನ್ನು ನಾನು ನೋಡಿದ್ದೇನೆ ಆದರೆ ಓದಲು ಬರುವುದಿಲ್ಲ. ಜಮೀನು ಬಳಿ ಹೋಗಿ ನಾನು ನೋಡಿಲ್ಲ. 2 ಎಕರೆ ಆಸ್ತಿಯಲ್ಲಿ 1ನೇ ಪ್ರತಿವಾದಿ ಸ್ವಾಧೀನ ಇದ್ದಾರೆ ಎಂದರೆ ಸುಳ್ಳು. ಈ ದಾವೆಯ ಬಗ್ಗೆ ನನಗೆ ಏನೂ ತಿಳಿಯದಿದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃಇಲ್ಲ.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು

ಮತ್ತು ಜೆ ಎಂ ಎಫ್ ಸಿ., ನಂಜನಗೂಡು.